# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

17

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE 3/9/2020

ಪ್ರತಿಪಕ್ಷಗಳಿಂದ ಸರ್ಕಾರದ ವಿರುದ್ಧ ಕಿಡಿ | ವಿವಾದಕ್ಕೆ ತೆರೆ ಎಳೆದ ಸಚಿವ ಪ್ರಹ್ಲಾದ್ ಜೋಷಿ

# ಪ್ರಶ್ನೋತ್ತರ ಅವಧಿ ಕಡಿತಕ್ಕೆ ವಿರೋಧ

ಉ.ವಾ 3/9/20

**ನವದೆಹಲಿ:** ಇದೇ ತಿಂಗಳ 14ರಿಂದ ಅ. 1ರವರೆಗೆ ನಡೆಯಲಿರುವ ಮುಂಗಾರು ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿ, ಶೂನ್ಯವೇಳೆಯ ಅವಧಿ ಹಾಗೂ ಖಾಸಗಿ ಸಂಸದರ ಮಸೂದೆ ಮಂಡನೆಗೆ ವಿಧಿಸಲಾಗಿರುವ ನಿರ್ಬಂಧ ಸಂಬಂಧ ವಿವಾದವೇರ್ಪಟ್ಟಿದೆ.

ಈ ಸಂಬಂಧ ಸ್ಪಷ್ಟನೆ ನೀಡಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ, ಕೊರೊನಾ ಭೀತಿ, ಸಮಯದ ಅಭಾವದಿಂದಾಗಿ ಪ್ರಶ್ನೋತ್ತರ, ಶೂನ್ಯ ವೇಳೆಯ ಅವಧಿ ಕಡಿತದ ಬಗ್ಗೆ ಮೊದಲೇ ಪ್ರತಿಪಕ್ಷ ನಾಯಕರ ಜತೆ ಚರ್ಚಿಸಲಾಗಿತ್ತು. ಆಗ ಒಪ್ಪಿಗೆಯನ್ನೂ ನೀಡಿದ್ದರು. ಪ್ರಶ್ನೋತ್ತರ ಅವಧಿಯನ್ನೂ ಸಂಪೂರ್ಣವಾಗಿ ಕಡಿತ ಮಾಡಲಾಗಿಲ್ಲ, ಲಿಖಿತ ರೂಪದಲ್ಲಿ ಸಂಸದರ ಪ್ರಶ್ನೆಗಳಿಗೆ ಉತ್ತರ ನೀಡಲಾಗುತ್ತದೆ ಎಂದಿದ್ದಾರೆ.

**ರಾಜನಾಥ್ ಮಾಹಿತಿ:** 'ಪ್ರಶ್ನೋತ್ತರಗಳಿಗೆ ಸಿದ್ಧಗೊಳ್ಳಲು ಸಚಿವರು ಸಂಸತ್ತಿನ ತಮ್ಮ ಕಚೇರಿ ಗಳಿಗೆ ತಮ್ಮ ಇಲಾಖೆಯ ಹಲವಾರು ಅಧಿಕಾರಿಗಳನ್ನು ಕರೆಯಿಸಿಕೊಂಡು ಸಮಾಲೋಚಿಸಬೇಕಾಗುತ್ತದೆ. ಇದರಿಂದ ಸಂಸತ್ತಿಗೆ ಬಂದು ಹೋಗುವವರ ಸಂಖ್ಯೆ ಜಾಸ್ತಿಯಾಗುತ್ತದೆ. ಹಾಗಾಗಿ, ಈ ಬಾರಿ ಅವನ್ನು ಕೈಬಿಡಲಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಮಗೆ ತಿಳಿಸಿರುವುದಾಗಿ ವಿಪಕ್ಷಗಳ



ಸದಸ್ಯರು ಹೇಳಿದ್ದಾರೆ.

**ನಾಯ್ಡುಗೆ ಬಿನೋಯ್ ಪತ್ರ:** ಸರ್ಕಾರದ ಈ ಕ್ರಮ ವಿರೋಧಿಸಿರುವ ರಾಜ್ಯಸಭಾ ಸದಸ್ಯ ಬಿನೋಯ್ ವಿಸ್ವಂ, ರಾಜ್ಯಸಭಾ ಸಭಾಪತಿಯಾದ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರಿಗೆ ಪತ್ರ ಬರೆದಿದ್ದಾರೆ. "ಈ ಬಾರಿ, ಕೊರೊನಾ ಹಿನ್ನೆಲೆಯಲ್ಲಿ ಲೋಕಸಭೆ, ರಾಜ್ಯಸಭೆಗಳನ್ನು ಕೆಲವು ನಿಬಂಧನೆಗಳಿಂದ ನಡೆಸಲಾಗುತ್ತಿದ್ದರೂ, ಯಾವಾಗಲೂ ನಡೆಯುತ್ತಿರುವ ಕಲಾಪಗಳಂತೆಯೇ ಈ ಬಾರಿಯೂ ನಡೆಯಲಿದೆ. ಹಾಗಿರುವಾಗ ಪ್ರಶ್ನೋತ್ತರ ಕಲಾಪ ಹಾಗೂ ಶೂನ್ಯ ವೇಳೆಯ ಕಲಾಪ ಎಂದಿನಂತೆ ನಡೆಸಲು ಸೂಚಿಸಬೇಕು" ಎಂದು ಮನವಿ ಮಾಡಿದ್ದಾರೆ.

**ಒಬ್ರಿಯಾನ್ ಮಾತು:** ಟಿಎಂಸಿಯ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯೆನ್, ಪ್ರತಿಪಕ್ಷಗಳ ಸಂಸದರಿಗೆ ಸರ್ಕಾರವನ್ನು ಪ್ರಶ್ನಿಸಲು ಅವಕಾಶವೇ ಸಿಗದಂತಾಗುತ್ತದೆ. ಸಂವಿಧಾನ ಜಾರಿಯಾದ ನಂತರ 1950ರ ನಂತರ ಹೀಗಾಗುತ್ತಿರುವುದು ಇದೇ ಮೊದಲ ಬಾರಿ. ಜತೆಗೆ ಪ್ರಶ್ನೋತ್ತರ, ಖಾಸಗಿ ಮಸೂದೆ ಮಂಡನೆ ರದ್ದತಿಯ ಅಗತ್ಯತೆ ಏನಿತ್ತು" ಎಂದು ಅವರು ಕೇಳಿದ್ದಾರೆ.

**ಎರಡು ಶಿಫ್ಟ್‌ಗಳಲ್ಲಿ ಕಲಾಪ:** ಲೋಕಸಭೆ ಹಾಗೂ ರಾಜ್ಯಸಭಾ ಕಲಾಪಗಳು ದಿನದ ಬೇರೆ ಅವಧಿಗಳಲ್ಲಿ ನಡೆಯುತ್ತವೆ. ಕಲಾಪದ ಮೊದಲ ದಿನ ಲೋಕಸಭೆಯು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ನಡೆದರೆ, ಉಳಿದ ದಿನಗಳಲ್ಲಿ ಮ. 3ರಿಂದ ರಾತ್ರಿ 7ರವರೆಗೆ ನಡೆಯಲಿದೆ. ಅ.1ವರೆಗೆ ಮಧ್ಯಾಹ್ನದ ಅವಧಿಯಲ್ಲೇ ಲೋಕಸಭಾ ಕಲಾಪ ಜರುಗಲಿವೆ. ರಾಜ್ಯಸಭೆಯ ಕಲಾಪ, ಮೊದಲ ದಿನ ಮಧ್ಯಾಹ್ನ 3ಕ್ಕೆ ಶುರುವಾಗಿ ರಾತ್ರಿ 7ಕ್ಕೆ ಅಂತ್ಯಗೊಂಡರೆ, ಉಳಿದ ದಿನಗಳಲ್ಲಿ ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ನಡೆಯುತ್ತದೆ. ಶನಿವಾರ, ಭಾನುವಾರವೂ ಕಲಾಪವಿದೆ.